# ಹಳೆ ಬೇರಿನ ದರ್ಶನ


ಕೊಹ್ಲಿ–ರಾಹುಲ್


ಸ್ಮಿತ್, ವಾರ್ನರ್

ಈ ಸಲದ ವಿಶ್ವಕಪ್ ಅನುಭವಿಗಳ ಪ್ರಾತ್ಯಕ್ಷಿಕೆಗಳಿಂದ ಶುರುವಾಗಿದೆ. ಹಳೆ ಬೇರನ್ನು ನೋಡಿ ಹೊಸ ಚಿಗುರು ಹೇಗೆಲ್ಲ ನಗುತ್ತದೆ ಎನ್ನುವುದು ಈಗ ಉಳಿದಿರುವ ಕುತೂಹಲ.

■ ಎನ್ವಿ

ವಿರಾಟ್ ಕೊಹ್ಲಿ, ಕ್ವಿಂಟನ್ ಡಿ ಕಾಕ್, ಡೇವಿಡ್ ವಾರ್ನರ್, ಜೋ ರೂಟ್, ಸ್ಟೀವ್ ಸ್ಮಿತ್, ಕುಶಾಲ್ ಮೆಂಡಿಸ್, ಕೆ.ಎಲ್. ರಾಹುಲ್, ರೋಹಿತ್ ಶರ್ಮ, ಮೊಹಮ್ಮದ್ ರಿಜ್ವಾನ್ ಇವರೆಲ್ಲರ ಅನುಭವದ ಮೆರವಣಿಗೆಯ ಒಂದು ಝಲಕ್ 2023ರ ವಿಶ್ವಕಪ್‌ನ ಶುರುವಿನಲ್ಲೇ ನಮಗೆ ಕಂಡಿದೆ. ಉತ್ಸಾಹ ಬತ್ತಿದಂತೆ ಇತ್ತೀಚೆಗೆ ಆಡುತ್ತಿದ್ದ ರೋಹಿತ್ ಶರ್ಮ ಅಫ್ಘಾನಿಸ್ತಾನ ತಂಡದ ಎದುರು ಆಡುವಾಗ ನಾಲ್ಕನೇ ಸ್ಟಂಪ್ ದಿಕ್ಕಿನತ್ತ ಬರುತ್ತಿದ್ದ ಚೆಂಡನ್ನು ಲೀಲಾಜಾಲವಾಗಿ ಸಿಕ್ಸರ್‌ಗೆ ಎತ್ತಿದರು. ಅಫ್ಘನ್ನರನ್ನು ಈಗ ದುರ್ಬಲ ಆಟಗಾರರು ಎನ್ನಲಾಗದು. ಆ ತಂಡದ ಕೆಲವರು ಐಪಿಎಲ್ ಕ್ರಿಕೆಟ್‌ನ ರುಚಿ ಹತ್ತಿಸಿಕೊಂಡು ವರ್ಷಗಳೇ ಉರುಳಿರುವುದರಿಂದ ರೋಹಿತ್ ಹೇಗೆ ಆಡುತ್ತಾರೆನ್ನುವುದು ಸ್ಪಷ್ಟವಿದೆ. ಇಷ್ಟರ ನಡುವೆಯೂ ರೋಹಿತ್ ಚಿಗಿತುಕೊಂಡಿದ್ದಕ್ಕೆ ಅನೇಕ ಕಾರಣಗಳು ನಮಗೆ ಕಂಡಾವು. ಆಸ್ಟ್ರೇಲಿಯಾ ಎದುರು ಡಕ್‌ಔಟ್ ಆಗಿದ್ದ ರೋಹಿತ್, ತಮ್ಮ ಛಾಪನ್ನು ಪ್ರದರ್ಶಿಸಲು ಸಜ್ಜಾಗಿರುವ ಒಂದು ಉಮೇದನ್ನಂತೂ ತೋರಿದರು.

ಶುಭಮನ್ ಗಿಲ್ ಜ್ವರದಿಂದ ಮೊದಲ ಪಂದ್ಯಗಳಲ್ಲಿ ಆಡಲು ಆಗಲಿಲ್ಲ. ಅವರು ತಂಡವನ್ನು ಸೇರಿಕೊಂಡರೆ, ಆಡುವ ಹನ್ನೊಂದು ಮಂದಿಯಲ್ಲಿ ಯಾರು ಹೊರಗಿರಬೇಕು ಎಂಬ ಪ್ರಶ್ನೆ ಈಗಾಗಲೇ ಎದುರಾಗಿದೆ. ಸೂರ್ಯಕುಮಾರ್ ಯಾದವ್ ಬೆಂಚ್ ಕಾಯುತ್ತಿದ್ದರೂ ಯಾವ ಗಳಿಗೆಯಲ್ಲಿ ಬೇಕಾದರೂ ಅವರನ್ನು ಒಂದು ಅಸ್ತ್ರವಾಗಿ ಪ್ರಯೋಗಿಸುವ ಸಾಧ್ಯತೆ ಇದ್ದೇ ಇದೆ.

ಈ ಸಲ ಎಡಗೈ ಬ್ಯಾಟ್ಸ್‌ಮನ್‌ಗಳು ಸುಲಭವಾಗಿ ರನ್ ಗಳಿಸುತ್ತಿರುವ ಮಾದರಿಯೊಂದು ಮೊದಲ ಪಂದ್ಯಗಳಲ್ಲಿ ಕಂಡಿದೆ. ಕ್ವಿಂಟನ್ ಡಿ ಕಾಕ್, ವಾರ್ನರ್, ರಚಿನ್ ರವೀಂದ್ರ, ಡೆವಾನ್ ಕಾನ್ವೆ, ಡೇವಿಡ್ ಮಲಾನ್, ಚರಿತ ಅಸಲಂಕಾ ಇವರೆಲ್ಲ ವಿಶ್ವಕಪ್ ಆರಂಭದಲ್ಲೇ ಕಣ್ಣು ಕೋರೈಸುವಂತೆ ಆಡಿದ ಎಡಗೈ ಬ್ಯಾಟ್ಸ್‌ಮನ್‌ಗಳು. ಈ ವಿದ್ಯಮಾನ ಗಮನಿಸಿದರೆ, ಇಶಾನ್ ಕಿಶನ್ ಉಪಸ್ಥಿತಿ ಭಾರತ ತಂಡದಲ್ಲೂ ಮುಖ್ಯ ಎನ್ನುವಂತೆ ಕಾಣುತ್ತದೆ.

ಆಸ್ಟ್ರೇಲಿಯಾ ಎದುರಿನ ಮೊದಲ ಪಂದ್ಯದಲ್ಲಿ ಭಾರತ ಸಂಕಷ್ಟದಲ್ಲಿದ್ದಾಗ ಕೆ.ಎಲ್. ರಾಹುಲ್ ಹಾಗೂ ಕೊಹ್ಲಿ ಆಡಿದ ರೀತಿ ಉತ್ತಮ ಪ್ರಾತ್ಯಕ್ಷಿಕೆ. ಎರಡು ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ತಂಡವೊಂದು ಏಕದಿನ ಕ್ರಿಕೆಟ್‌ನಲ್ಲಿ ಗುರಿ ಬೆನ್ನಟ್ಟಿ ಗೆದ್ದ ಯಾವ ಉದಾಹರಣೆಯೂ ಈ ಮೊದಲು ಇಲ್ಲ. 'ಒಂದಿಷ್ಟು ಹೊತ್ತು ಟೆಸ್ಟ್‌ನಂತೆ ಆಡು' ಎಂದು ವಿರಾಟ್ ಕೊಹ್ಲಿ ಹೇಳಿದ್ದನ್ನು ಪಂದ್ಯದ ನಂತರ ರಾಹುಲ್ ನೆನಪಿಸಿಕೊಂಡಿದ್ದರು. ಚುಟುಕು ಕ್ರಿಕೆಟ್ ನಶೆಯಲ್ಲೇ ದೀರ್ಘಾವಧಿ ಕಳೆದುಹೋದಂತೆ ಅನೇಕರು ಆಡುತ್ತಿರುವ ಹೊತ್ತಿನಲ್ಲಿ ತಾಳ್ಮೆಯ ಇಂತಹ ಹೋರಾಟ ಕಣ್ಣಿಗೆ ಕಟ್ಟುತ್ತದೆ. ಶ್ರೀಲಂಕಾ ಎದುರಿನ ಪಂದ್ಯದಲ್ಲಿ 24 ವರ್ಷದ ಅಬ್ದುಲ್ಲ ಶಫೀಕ್ ಹಾಗೂ ಅನುಭವಿ ವಿಕೆಟ್ ಕೀಪರ್ ಮೊಹಮ್ಮದ್ ರಿಜ್ವಾನ್ ತೋರಿದ ಲಯವೂ ಚಿತ್ತಾಪಹಾರಿ. ಈ ಇಬ್ಬರು 345 ರನ್‌ಗಳ ದೊಡ್ಡ ಗುರಿಯ ಬೆನ್ನಟ್ಟಿ, ಪಾಕಿಸ್ತಾನ ತಂಡಕ್ಕೆ ಗೆಲುವು ದಕ್ಕಿಸಿಕೊಟ್ಟರು. ಇದುವರೆಗೆ ವಿಶ್ವಕಪ್‌ನ ಯಾವ ಪಂದ್ಯವನ್ನೂ ಪಾಕಿಸ್ತಾನದ ವಿರುದ್ಧ ಶ್ರೀಲಂಕಾ ಗೆದ್ದಿಲ್ಲ.

ರಾಹುಲ್ ಕಿವಿಯಲ್ಲಿ ಕೊಹ್ಲಿ ಹೇಳುವ ಮಾತು, ಶಫಿಕ್ ತಲೆಯೊಳಗೆ ರಿಜ್ವಾನ್ ಬಿಡುವ ತಂತ್ರ, ನಗುನಗುತ್ತಲೇ ವಾರ್ನರ್ ಜೊತೆಗೂಡಿ ಸ್ಟೀವ್ ಸ್ಮಿತ್ ಪುಲ್ ಮಾಡುವ ಪರಿ, ಕಾನ್ವೆ ಪಳಗಿದ ಕಾಲುಗಳ ಲಯ ನೋಡಿಕೊಂಡೇ ಅವರನ್ನೂ ಮೀರಿಸಬಲ್ಲೆ ಎನ್ನುವ ನಗು ಸೂಸುವ ರಚಿನ್ ರವೀಂದ್ರ – ನೋಡಿದರೆ ಹೊಸ ಚಿಗುರಿಗೆ ಹಳೆ ಬೇರು ಯಾಕೆ ಮುಖ್ಯ ಎನ್ನುವುದು ಗೊತ್ತಾಗುತ್ತದೆ.

ಮೊದಲ ಎರಡು ಪಂದ್ಯಗಳಲ್ಲಿ ಹೆಚ್ಚು ಸಿಕ್ಸರ್ ಹೊಡೆದವರ ಪಟ್ಟಿಯಲ್ಲಿ ಶ್ರೀಲಂಕಾದ ಕುಶಾಲ್ ಮೆಂಡಿಸ್ 14 ಸಿಕ್ಸರ್ ಚಚ್ಚಿದ್ದರು. ನ್ಯೂಜಿಲೆಂಡ್‌ನ ಡೆವಾನ್ ಕಾನ್ವೆ 24 ಬೌಂಡರಿಗಳನ್ನು ಸಿಡಿಸಿದ್ದರು. ಈ ಪಟ್ಟಿಯಲ್ಲಿ ಕೊಹ್ಲಿ, ರಾಹುಲ್ ಹೆಸರಿಲ್ಲ. ಅವರಿಬ್ಬರ ರನ್ನಿಂಗ್ ಬಿಟ್ವೀನ್ ವಿಕೆಟ್ಸ್ ಎಷ್ಟು ಮುಖ್ಯವಾಯಿತು ಎನ್ನುವುದನ್ನು ಗಮನಿಸಬೇಕು.

ಭಾರತದ ಮೊದಲ ಬ್ಯಾಟ್ಸ್‌ಮನ್‌ಗಳು ತಡಕಿ ನೋಡಿಕೊಳ್ಳುವಂತೆ ಬೌಲಿಂಗ್ ಮಾಡಿದ್ದ ಮಿಚೆಲ್ ಸ್ಟಾರ್ಕ್, ಮತ್ತೆ ಕಾಡಬಲ್ಲ ಸಾಮರ್ಥ್ಯ ತೋರಿರುವ ಜಸ್‌ಪ್ರೀತ್ ಬುಮ್ರಾ, ಸ್ವಿಂಗ್ ಬೌಲಿಂಗ್ ಹೇಗಿರಬೇಕು ಎನ್ನುವುದನ್ನು ಪದೇಪದೇ ಕಾಣಿಸುವ ಹೇಜಲ್‌ವುಡ್, ಆಸ್ಟ್ರೇಲಿಯನ್ನರು ಈಗಲೂ ಆಡಲು ಹೆದರುವಂತೆ ಮಾಡಬಲ್ಲ ಆರ್. ಅಶ್ವಿನ್ ಎಲ್ಲರೂ ಅನುಭವಿಗಳೇ. ಈ ಸಲದ ವಿಶ್ವಕಪ್, ಅನುಭವಿಗಳ ಪ್ರಾತ್ಯಕ್ಷಿಕೆಗಳಿಂದ ಶುರುವಾಗಿರುವುದಂತೂ ದಿಟ. ಹಳೆ ಬೇರನ್ನು ನೋಡಿ ಹೊಸ ಚಿಗುರು ಹೇಗೆಲ್ಲ ನಗುತ್ತದೆ ಎನ್ನುವುದೀಗ ಉಳಿದಿರುವ ಕುತೂಹಲ.

ಪ್ರತಿಕ್ರಿಯಿಸಿ: feedback@sudha.co.in


ರೋಹಿತ್ ಶರ್ಮ